

ಹದಿನೈದು ವರ್ಷಗಳ ಹಿಂದೆ ಕೃಷಿ ಬಗ್ಗೆ ಏನೇನೂ ಗೊತ್ತಿರಲಿಲ್ಲ. ಊರಿನಲ್ಲಿ ಅಪ್ಪ ಇತರೆಲ್ಲರ ಹಾಗೆ ರಾಗಿ, ಜೋಳ ಬೆಳೆಯುತ್ತಿದ್ದರು. ಬೆಂಗಳೂರಿನಲ್ಲಿ ಎಮ್‌ಎಸ್‌ಡಬ್ಲ್ಯೂ ಓದುತ್ತಿದ್ದ ದಿವಾಕರ್, ಫುಕುವೊಕರ 'ಒಂದು ಹುಲ್ಲಿನ ಕ್ರಾಂತಿ' ಪುಸ್ತಕವನ್ನು ಓದಿ ತಾನೂ ಏನಾದರೊಂದು ಕ್ರಾಂತಿ ಮಾಡಬೇಕೆಂಬ ಕನಸು ಕಾಣುತ್ತಿದ್ದರು.

ಕೃಷಿ ಮೇಳಕ್ಕೆ ಹೋಗಿದ್ದಾಗ ಯಾರೋ ತಮಿಳು ರೈತನೊಬ್ಬ 'ಭಾರತದಲ್ಲೂ ಖರ್ಜೂರ ಬೆಳೆಯಲು ಸಾಧ್ಯ' ಎಂಬ ಶಿರೋನಾಮೆಯ ಕರಪತ್ರವನ್ನು ಹಂಚುತ್ತಿದ್ದ. ಮೇಳದಲ್ಲಿ ಹಂಚಿದ ನೂರಾರು ಕರಪತ್ರಗಳಲ್ಲಿ ಇದೂ ಒಂದು ಎಂದು ಚೀಲಕ್ಕೆ ತುರುಕಿಕೊಂಡು ಬಂದ ದಿವಾಕರ್, ಕೆಲವು ದಿನಗಳ ನಂತರ ಯಾವ ವಿಶೇಷ ನಿರೀಕ್ಷೆಯನ್ನೂ ಇಟ್ಟುಕೊಳ್ಳದೆ, ಧರ್ಮಪುರಿಯ ಆ ರೈತ ನಿಝಾಮುದ್ದೀನ್ ಎಂಬುವರನ್ನು ಹುಡುಕಿಕೊಂಡು ಹೋದರು. ಅಲ್ಲಿ ಅವರ ಖರ್ಜೂರ ತೋಟ ನೋಡಿ ಅಚ್ಚರಿಪಟ್ಟರು. ಆ ರೈತನೂ ಹಿಂದೆಂದೋ ಕೃಷಿ ಕಾರ್ಮಿಕನಾಗಿ ಅರಬ್ಬೀ ದೇಶದ ಖರ್ಜೂರ ತೋಟದಲ್ಲಿ ದುಡಿದು ಹಣ್ಣಾಗಿ, ಕೆಲಸ ಬಿಟ್ಟು ಹಿಂದಿರುಗುವಾಗ ಕೆಲವು ಸಸಿಗಳನ್ನು ತಂದು ಬೆಳೆಸಿದ್ದರು.

ದಿವಾಕರ್ ಹೇಗೋ ಅಪ್ಪನಿಗೆ ದುಂಬಾಲು ಬಿದ್ದು ತನ್ನ ಎರಡು ಎಕರೆ ಜಾಗದಲ್ಲಿ ಖರ್ಜೂರ ಬೆಳೆಯಲು ಅನುಮತಿ ಪಡೆದರು.



ದಿವಾಕರ್ ಚಿನ್ನಪ್ಪ

ನಿಝಾಮುದ್ದೀನ್ ಮಾರ್ಗದರ್ಶನದಲ್ಲಿ ಬಾರ್ಹೀ ತಳಿಯ 120 ಖರ್ಜೂರದ ಟಿಸ್ಯೂ ಕಲ್ಚರ್ ಸಸಿಗಳನ್ನು ತಲಾ 3000 ರೂಪಾಯಿಗಳಂತೆ ತರಿಸಿ, 24 ಅಡಿಗೆ ಒಂದೊಂದರಂತೆ ಗುಂಡಿ ತೋಡಿಸಿ ಹಟ್ಟಿ ಗೊಬ್ಬರ ತುಂಬಿಸಿ ನೆಟ್ಟೂಬಿಟ್ಟರು. ಬೇಸಿಗೆಯಲ್ಲಿ ಹನಿ ನೀರಾವರಿ ವ್ಯವಸ್ಥೆ ಮಾಡಿದರು. 'ಇವನಿಗೆಲ್ಲೋ ಹುಚ್ಚು' ಎಂತಲೋ, 'ಅಪ್ಪನ ಜಮೀನನ್ನು ಮರಳುಗಾಡು ಮಾಡ್ತಾನೆ' ಎಂತಲೋ ಆಸುಪಾಸಿನವರು ಮಾತನಾಡುತ್ತಿದ್ದಾಗ ಅವರಿಗೇ ಅಚ್ಚರಿ ಎಂಬಂತೆ ಗಿಡಗಳು ಚೆನ್ನಾಗಿಯೇ ಬೆಳೆದವು. 'ಈಚಲು ಮರ ನೆಟ್ಟೀಯೇನೊ? ಸೇಂದಿಗೀಂದಿ ಇಳಿಸ್ತೀಯ?' ಎಂದು ಅವರಿವರು ಕುಹಕವಾಡುತ್ತಿದ್ದಾಗ, ಮೊಣಕಾಲೆತ್ತರ ಬೆಳೆದಿದ್ದ ಗಿಡಗಳಿಂದ ನಾಲ್ಕನೆಯ ವರ್ಷದಲ್ಲೇ ಹೊಂಬಾಳೆ ಹೊರಬಿತ್ತು. ಪ್ರತಿ ಮರದಲ್ಲೂ ಆರೆಂಟು ಕದಿರುಗಳು ಗೋಚರಿಸಿದವು.

## ಮೊದಲ ಫಲದ ಸಂಭ್ರಮ

ದಿವಾಕರ್‌ಗೆ ಸಂಭ್ರಮ ಮಿಶ್ರಿತ ಗಾಬರಿ. ಗಿಡ ನೆಡುವಾಗಲೇ ಪ್ರತಿ ಹತ್ತು 'ಹೆಣ್ಣು' ಸಸಿಗಳ ಮಧ್ಯದಲ್ಲಿ ಒಂದೊಂದರಂತೆ 'ಗಂಡು' ಸಸಿಗಳನ್ನೂ ನೆಟ್ಟಿದ್ದರು. ಎಲ್ಲವುಗಳಲ್ಲೂ ಹೂಕದಿರುಗಳು ಅರಳಿದ್ದವು ನಿಜ. ಗಂಡು ಹೂಗಳ ಪರಾಗರೇಣುಗಳು ಗಾಳಿಯಲ್ಲೇ ಹಾರಿ ಬಂದು ಹೆಣ್ಣು ಹೂಗಳನ್ನು ಫಲವಂತ ಮಾಡಬೇಕು ನಿಜ. ಆದರೂ ಕಾಯಿ ಕಚ್ಚದಿದ್ದರೆ? ದೂರದಲ್ಲೆಲ್ಲಿಂದಲೋ ಈಚಲು ಮರದ ಗಂಡು ಪರಾಗಗಳು ಬಂದರೂ ಖರ್ಜೂರದ ಕಾಯಿ ಕಚ್ಚುತ್ತದೆ ಎಂಬುದು ಗೊತ್ತಿತ್ತು. ಹಾಗೇನಾದರೂ ಆಗಿ ಕಾಯಿಯ ಮೂಲ ಸ್ವಾದವೇ ಹಾಳಾದರೆ?

ಮತ್ತೊಮ್ಮೆ ಧರ್ಮಪುರಿಗೆ ಓಡಿದರು. ಗಂಡು ಹೂಗಳ ಪರಾಗರೇಣುಗಳನ್ನು ಹೆಣ್ಣು ಹೂಗಳ